C.R.P.67

Form No.4
(Civil)
Deposition
Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆಃ 296/2018**

**ಪ್ರಾಸಾ. 30 ಚಾಸಾ. 43**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಅಶೋಕ್ ಜೆ. |
| **ತಂದೆಯ ಹೆಸರು** | : | ಜೋಗಯ್ಯ |
| **ವಯಸ್ಸು** | : | 40 ವರ್ಷಗಳು |
| **ಉದ್ಯೋಗ** | : | ಪೊಲೀಸ್ ಇನ್ಸ್‌ಪೆಕ್ಟರ್, ಎಸ್‌ಎಆರ್‌ಪಿ, ಬೆಂಗಳೂರು. |
| **ವಾಸ** | : | ಬೆಂಗಳೂರು. |

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 19.03.2025**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿನಾಂಕ 20.03.2017 ರಿಂದ ದಿನಾಂಕ 10.08.2018 ರವರೆಗೆ ನಂದಗುಡಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣಕ್ಕೆ ಸಂಬಂಧಿಸಿದಂತೆ, ಕೊಲಂಬಿಯಾ ಏಷಿಯಾ ಆಸ್ಪತ್ರೆ, ವೈಟ್‌ಫೀಲ್ಡ್ ರವರಿಂದ ಗಾಯಾಳು ರಮೇಶ್ ಎಂಬುವವರು ಹೊಡದಾಟದ ಹಿನ್ನಲೆಯಲ್ಲಿ ಆಸ್ಪತ್ರೆಗೆ ದಾಖಲಾದ ಬಗ್ಗೆ ಮಾಹಿತಿ ನೀಡಿದ್ದು, ನಾನು ಆಸ್ಪತ್ರೆಗೆ ದಿನಾಂಕ 17.11.2017 ರಂದು ರಾತ್ರಿ 09.30 ಗಂಟೆಗೆ

ತೆರಳಿದ್ದು ಗಾಯಾಳುವಿನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಗಳ ಸಮಕ್ಷಮ ಮಾಡಿಕೊಂಡಿರುತ್ತೇನೆ. ನಂತರ ಮಧ್ಯರಾತ್ರಿ 12.30 ಗಂಟೆ ಸಮಯದಲ್ಲಿ ಠಾಣೆಗೆ ಹಾಜರಾಗಿ ಪ್ರಕರಣವನ್ನು ದಾಖಲಿಸಿ, ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿ ನಿಶಾನೆ ಪಿ-5 ಹೇಳಿಕೆ ದೂರಿನಲ್ಲಿ ತಮ್ಮ ಸಹಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-5(ಬಿ) ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಶಾನೆ ಪಿ-33 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-33(ಎ) ಎಂದು ಗುರುತಿಸಲಾಯಿತು.

3. ನಂತರ ದಿನಾಂಕ 18.11.2017 ರಂದು ಬೆಳಗ್ಗೆ 8.30 ಗಂಟೆಗೆ ಸದರಿ ಆಸ್ಪತ್ರೆಗೆ ಪಂಚರಾದ ಚಾಸಾ-14, 15 ರವರ ಜೊತೆಗೆ ಹೋಗಿ, ಅವರ ಸಮಕ್ಷಮ ರಕ್ತಕಲೆಯಾಗಿದ್ದ ಗಾಯಾಳು ರಮೇಶ್ ಧರಿಸಿದ್ದ ಅರ್ಧ ತೋಳಿನ ಕಪ್ಪು ಮತ್ತು ಸಿಲ್ವರ್ ಗೆರೆಗಳಿರುವ ಶರ್ಟ್, ಸಿಮೆಂಟ್ ಬಣ್ಣದ ಸ್ಯಾಂಡೋ ಬನಿಯನ್, ಕಪ್ಪು ಆನಂದ ನೀಲಿ ಮತ್ತು ಗೋಲ್ಡ್ ಕಲರ್ ಮಿಶ್ರಿತ ಕಪ್ಪು ಹೂಗಳ ಡಿಜೈನ್ ಇರುವ ಸೀರೆ, ಕಪ್ಪು ಬಣ್ಣದ ಒಳ ಲಂಗ ಬಟ್ಟೆಗಳನ್ನು ವಶಪಡಿಸಿಕೊಳ್ಳುವ ಸಂಬಂಧ ಅಮಾನತು ಮಹಜರ್ ನ್ನು ಚಾಸಾ-8 ರವರು ಸಮಕ್ಷಮ ಜರುಗಿಸಿರುತ್ತೇನೆ. ಸಾಕ್ಷಿ ನಿಶಾನೆ ಪಿ-16 ರಲ್ಲಿರುವ ತಮ್ಮ ಸಹಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ-16(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಮುದ್ದೆಮಾಲು- 2 ರಿಂದ 5 ನ್ನು ಗುರುತಿಸುತ್ತಾರೆ.

4. ನಂತರ ಗಾಯಾಳು ಹಾಗೂ ಪ್ರತ್ಯಕ್ಷದರ್ಶಿ ಸಾಕ್ಷಿ ಲೋಕೇಶ್ ರವರು ಘಟನಾ ಸ್ಥಳವನ್ನು ತೋರಿಸಿದ್ದು, ಘಟನಾ ಸ್ಥಳಕ್ಕೆ ತೆರಳಿ ಪಂಚರಾದ ಚಾಸಾ-9 ಮತ್ತು 10 ರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಬೆಳಗ್ಗೆ 11.30 ರಿಂದ ಮಧ್ಯಾಹ್ನ 12.30 ಗಂಟೆಯವರೆಗೆ ಜರುಗಿಸಿರುತ್ತೇನೆ. ಸ್ಥಳದಿಂದ ಸಿಸಿಟಿವಿ ಗೆ ಅಳವಡಿಸಿದ್ದ ಮೇಲ್ಭಾಗದ ಬಿಳಿ ಬಣ್ಣದ ಪ್ಲಾಸ್ಟಿಕ್ ನ ಎರಡು ಸೇಫ್ಟಿ ಗಾರ್ಡ್

ಗಳು, ರಕ್ತ ಮಿಶ್ರಿತ ಮಣ್ಣು ಹಾಗೂ ಸಾದಾ ಮಣ್ಣನ್ನು ವಶಪಡಿಸಿಕೊಂಡಿರುತ್ತೇನೆ. ಸದರಿ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ.

**ಈ ಹಂತದಲ್ಲಿ ಪಿ.ಪಿ. ರವರ ಕೋರಿಕೆಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ವಸ್ತುಗಳನ್ನು ಗುರುತಿಸುವ ಸಲುವಾಗಿ ಮುಂದೂಡಲಾಯಿತು.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ದೇವಾನಂದ)
6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.